
# ಸ್ಕಂದ ಪುರಾಣದ ಮೂಲ


ಕಥೆ: ಜನ

ಚಿತ್ರ: ಶಂಕರ್





ಮರುದಿನ ದೇವಸ್ಥಾನಕ್ಕೆ ಬಂದಾಗ ತನ್ನ ಕೃತಿಯನ್ನು ದೇವರೇ ತಿದ್ದಿರುವುದನ್ನು ಕಾಣುತ್ತಿದ್ದ. ಅವನ ಆನಂದಕ್ಕೆ ಪಾರವೇ ಇಲ್ಲ.
ಓ! ಎಂತಹ ಅದೃಷ್ಟಶಾಲಿ ನಾನು !
5
ಕೃತಿ ಸಂಪೂರ್ಣವಾದ ಮೇಲೆ ಅವನು ಆ ಊರಿನ ಧನಿಕರನ್ನೂ, ಪಂಡಿತರುಗಳನ್ನೂ ಭೇಟಿ ಮಾಡಿ ಅದನ್ನು ಅವರಿಗೆ ತೋರಿಸಿದ. ಧನಿಕರೂ ಅವನನ್ನು ಹುಡುಕಿಕೊಂಡು ಬಂದು ಅವನನ್ನು ಹೊಗಳಲಾರಂಭಿಸಿದರು.
ನೀನು ಸ್ಕಂದ ಪುರಾಣವನ್ನು ರಚಿಸಿರುವೆಯಂತೆ. ಅದನ್ನು ದೇವಸ್ಥಾನದಲ್ಲಿ ಎಲ್ಲರ ಮುಂದೆ ಓದುವ ಏರ್ಪಾಡು ಮಾಡಬೇಕು.
ದೇವರ ಇಚ್ಛೆ ಇದ್ದಂತೆ ಆಗಲಿ.
6
ದೇವಸ್ಥಾನದಲ್ಲಿ ದೊಡ್ಡ ಸಭೆ ಸೇರಿತು. ಅವನ ಗ್ರಂಥವನ್ನು ಹೂವಿನಿಂದ ಅಲಂಕರಿಸಲಾಯಿತು. ಕಾಚಿಯಪ್ಪ ವಿನಾಯಕ ವಂದನೆಯೊಡನೆ, ಸ್ಕಂದಪುರಾಣವನ್ನು ಓದಲಾರಂಭಿಸಿದ.
ವಿನಾಯಕನಿಗೆ ಹತ್ತು ಪವಿತ್ರ ಕೈಗಳೂ, ಐದು ಪ್ರಕಾಶಮಾನವಾದ ಮುಖಗಳೂ ಇವೆ.
7
ಒಬ್ಬ ಕವಿ ಮೇಲೆದ್ದ.....
ಕಾಚಿಯಪ್ಪ, ಸ್ವಲ್ಪ ನಿಲ್ಲಿಸು. ಮೊದಲ ಪಂಕ್ತಿಯಲ್ಲೇ ವ್ಯಾಕರಣ ದೋಷವಿದೆ. ಇದಕ್ಕೆ ಏನು ಉತ್ತರ ಹೇಳುವೆ?
8
ಓ ಮಹಾಕವಿ! ನೀನು ಹೇಳುವುದು ಸರಿಯಿರಬಹುದು. ಆದರೆ, ಈ ಗ್ರಂಥವನ್ನು ಸ್ವತಃ ಭಗವಂತನೇ ಪರಿಷ್ಕರಿಸಿದ್ದಾನೆ.
9
ನಮಗೆ ಅದೆಲ್ಲಾ ಗೊತ್ತಿಲ್ಲ. ಇದಕ್ಕೆ ಕಾರಣಕೊಟ್ಟು, ನಂತರ ನಿನ್ನ ವಾಚನವನ್ನು ಮುಂದುವರಿಸು.
10



ಓದುವುದನ್ನು ನಿಲ್ಲಿಸಲಾಯಿತು. ಸಭೆ ಚದುರಿತು.
11
ಸ್ನೇಹಿತರುಗಳೇ, ನಾಳೆ ಉತ್ತರ ಹೇಳಿ, ಮುಂದಕ್ಕೆ ಓದುತ್ತೇನೆ.
ಅಂದು ರಾತ್ರಿ...
12
ಸ್ವಾಮಿ! ನನಗೆ ಅವಮಾನವಾಗಿದೆ. ಇದಕ್ಕೆ ತಾವು ಉತ್ತರ ಹೇಳಬೇಕು. ಇಲ್ಲವಾದಲ್ಲಿ ಆಮರಣ ಉಪವಾಸ ಮಾಡಿ ಪ್ರಾಣ ಬಿಡುತ್ತೇನೆ.
ಚಿಂತಿಸಬೇಡ! ನಾಳೆ ನಾನೇ ಪ್ರತ್ಯಕ್ಷನಾಗಿ ಸಭೆಗೆ ಉತ್ತರ ಕೊಡುತ್ತೇನೆ.
ಮಾರನೇ ದಿನ ಮತ್ತೆ ಸಭೆ ಸೇರಿತು. ಕಾಚಿಯಪ್ಪ ಮುಂದಕ್ಕೆ ಓದಲು ತೊಡಗಿದ.
13
ಮೊದಲು ನಿನ್ನ ಮೊದಲನೆ ಸಾಲಿನ ತಪ್ಪಿಗೆ ಉತ್ತರ ಹೇಳು.
ಅವನು ಹೇಳಬೇಕಿಲ್ಲ. ನಾನು ಹೇಳುತ್ತೇನೆ. ನಿನಗೇನು ಗೊತ್ತು? ವೀರ ಸೋಳಿಯಂ ಎಂಬ ಗ್ರಂಥವನ್ನು ತೆಗೆದುನೋಡು. ಅದರಲ್ಲಿ ಹೇಳಿರುವ ವ್ಯಾಕರಣದಿಂದಲೇ ಇದೂ ರಚಿತವಾಗಿದೆ. ಆ ಕೃತಿಯನ್ನು ಎಲ್ಲಾ ಪಂಡಿತರೂ ಸ್ವೀಕರಿಸಿದ್ದಾರೆ.
ಅಲ್ಲಿ ನೆರೆದಿದ್ದವರು ಜೋರಾಗಿ ಕೈತಟ್ಟಿ, ಆ ಕವಿಗೆ ತಮ್ಮ ಮೆಚ್ಚುಗೆ ಸೂಚಿಸಿದರು.
14
ಯಾರೀ ಮಹಾಕವಿ?
ಓ ಅದೃಶ್ಯನಾಗಿ ಬಿಟ್ಟನಲ್ಲ!
ಈಗ ತಾನೇ ಇಲ್ಲಿದ್ದ!
ಓ ಭಗವಂತ, ನಿನ್ನ ಕರುಣೆಯನ್ನೂ, ಮಹಿಮೆಯನ್ನೂ ಹೇಗೆ ವರ್ಣಿಸಲಿ?
ಓ ಭಗವಂತನೇ ಆ ಕವಿಯ ರೂಪದಲ್ಲಿ ಬಂದಿದ್ದ.
ಅದರಲ್ಲಿ ಸಂದೇಹವೇ ಇಲ್ಲ.
15
ನಿನ್ನ ಘನತೆಯನ್ನು ತಿಳಿಯದೆ, ಮಧ್ಯೆ ಪ್ರವೇಶಿಸಿ ನೀನು ಹಾಡುವುದನ್ನು ನಿಲ್ಲಿಸಿದ್ದಕ್ಕಾಗಿ ನನ್ನನ್ನು ಕ್ಷಮಿಸು.
ಕ್ಷಮಿಸಲು ನಾನು ಯಾರು? ನಿನಗೆ ಸಂಶಯ ಬಂದದ್ದರಿಂದ ನಮಗೆಲ್ಲಾ ದೇವರ ದರ್ಶನವಾಯಿತು.
ಗ್ರಂಥಪಠನ ಸುಮಾರು ಒಂದು ವರುಷ ನಡೆಯಿತು. ಅದು ಮುಗಿದಾಗ ಕಾಚಿಯಪ್ಪನನ್ನು ವೈಭವದಿಂದ ಮೆರವಣಿಗೆಯಲ್ಲಿ ಕರೆದೊಯ್ದರು.
16
ಜೈ ಸುಬ್ರಹ್ಮಣ್ಯಸ್ವಾಮಿ!
ಭಗವಂತನಿಗೆ ಜಯವಾಗಲಿ!
ಹರ! ಹರ!
ಶಿವ! ಶಿವ!